(ಕರ್ನಾಟಕ ಸರ್ಕಾರ)

## ಕರ್ನಾಟಕ ರೈತ ಸುರಕ್ಷಾ
## ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆ

# ಹಿಂಗಾರು ಮತ್ತು ಬೇಸಿಗೆ 2016–17ರ
# ಸರ್ಕಾರಿ ಆದೇಶ

**ಸರ್ಕಾರದ ಆದೇಶ ಸಂಖ್ಯೆ.**

**ಕೃಇ/110/ಕೃಕೈಲು/2016, ಬೆಂಗಳೂರು; ದಿನಾಂಕ:07-10-2016.**

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು 2016-17ರ ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳಲ್ಲಿ ಅನುಷ್ಠಾನಗೊಳಿಸಲು ಹೋಬಳಿ, ಗ್ರಾಮ ಪಂಚಾಯತಿ ಮತ್ತು ಬೆಳೆಗಳ ಘೋಷಣೆ ಬಗ್ಗೆ – ಆದೇಶ.

ಓದಲಾಗಿದೆ: 1) ಕೇಂದ್ರ ಸರ್ಕಾರದ ಪತ್ರ ಸಂ.:13015/03/2016-ಕ್ರೆಡಿಟ್-II; ದಿನಾಂಕ:23-2-2016.
2) ಸರ್ಕಾರದ ಆದೇಶ ಸಂ: ಕೃಇ/67/ಕೃರಾಗೊ/2016, ದಿನಾಂಕ:25-04-2016 ಹಾಗೂ ಸೇರ್ಪಡೆ ದಿನಾಂಕ:23-07-2016.
3) ಸರ್ಕಾರದ ಆದೇಶ ಸಂಖ್ಯೆ: ಕೃಇ/12/ಕೃಉಇ/2016, ದಿನಾಂಕ:26-05-2016.
4) ಕೃಷಿ ಆಯುಕ್ತರ ಪತ್ರದ ಸಂಖ್ಯೆ:ಉಕೃನಿ(ಬೆವಿ)/ತಾಂ-1/30/2016-17;ದಿನಾಂಕ:07-10-2016.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು 2016-17ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ್ದು, 2016-17ನೇ ಸಾಲಿನಲ್ಲಿ "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ" ಅಡಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮುಂಗಾರು 2016ಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ 2016-17ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (4)ರ ಪತ್ರದಲ್ಲಿ ಕೃಷಿ ಆಯುಕ್ತರು, ಬೆಂಗಳೂರು ಇವರು ರಾಜ್ಯಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯು ತೆಗೆದುಕೊಂಡ ತೀರ್ಮಾನದಂತೆ 2016-17ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದು ಈ ಕೆಳಕಂಡ ಅಂಶಗಳ ಕುರಿತು ಅನುಮೋದನೆ ಕೋರಿರುತ್ತಾರೆ.

1. 2016-17ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ
   ಆಹಾರ ಮತ್ತು ಎಣ್ಣೆಕಾಳು ಬೆಳೆಗಳು: 19 ಬೆಳೆಗಳಾದ ಭತ್ತ (ನೀರಾವರಿ), ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ರಾಗಿ (ನೀರಾವರಿ), ರಾಗಿ (ಮಳೆಆಶ್ರಿತ), ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಉದ್ದು (ಮಳೆ ಆಶ್ರಿತ), ಹುರುಳಿ (ಮಳೆ ಆಶ್ರಿತ), ಹೆಸರು (ಮಳೆಆಶ್ರಿತ), ಅಗಸೆ (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ), ನೆಲಗಡಲೆ (ಶೇಂಗಾ) (ಮಳೆಆಶ್ರಿತ) ಮತ್ತು ಕುಸುಮೆ (ಮಳೆ ಆಶ್ರಿತ) ಇವುಗಳನ್ನು ಹಿಂಗಾರು ಹಂಗಾಮಿಗೆ ಹಾಗೂ 5 ಬೆಳೆಗಳಾದ ಭತ್ತ (ನೀರಾವರಿ), ರಾಗಿ (ನೀರಾವರಿ), ನೆಲಗಡಲೆ (ಶೇಂಗಾ) (ನೀರಾವರಿ), ನೆಲಗಡಲೆ (ಶೇಂಗಾ) (ಮಳೆಆಶ್ರಿತ) ಮತ್ತು ಸೂರ್ಯಕಾಂತಿ (ನೀರಾವರಿ) ಇವುಗಳನ್ನು ಬೇಸಿಗೆ ಹಂಗಾಮಿಗೆ ಅಧಿಸೂಚನೆ ಕುರಿತು.
   ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳು: ಈರುಳ್ಳಿ (ನೀರಾವರಿ), ಆಲೂಗಡ್ಡೆ (ನೀರಾವರಿ) ಮತ್ತು ಟೊಮ್ಯಾಟೋ ಬೆಳೆಗಳನ್ನು ಹಿಂಗಾರು ಹಂಗಾಮಿಗೆ ಮತ್ತು ಈರುಳ್ಳಿ (ನೀರಾವರಿ) ಬೆಳೆಯನ್ನು ಬೇಸಿಗೆ ಹಂಗಾಮಿಗೆ ಹೋಬಳಿ ಮಟ್ಟದಲ್ಲಿ ಅಧಿಸೂಚನೆ ಕುರಿತು.

2. ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ (**Localised calamities**) ಆಲಿಕಲ್ಲು ಮಳೆ (**Hailstorm**), ಭೂ ಕುಸಿತ (**Land slide**) ಮತ್ತು ಬೆಳೆ ಮುಳುಗಡೆ (**Inundation**) ಸಂದರ್ಭದಲ್ಲಿ ಬೆಳೆ ನಷ್ಟವುಂಟಾದರೆ ವೈಯಕ್ತಿಕ ನಷ್ಟದ ನಿರ್ಧರಣೆಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಧಿಸೂಚನೆ ಕುರಿತು.

3. ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ಎಲ್ಲಾ ಜಿಲ್ಲೆಗಳಲ್ಲಿ ವಿವಿಧ ಕಾರಣಗಳಿಂದ ಅಧಿಸೂಚಿತ ಘಟಕದಲ್ಲಿ ಶೇಕಡಾ 75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ / ಮೊಳಕೆ ಬಾರದಿದ್ದರೆ (**Prevented sowing/Planting Risk**) ವಿಮಾ ಮೊತ್ತದ ಗರಿಷ್ಟ ಶೇಕಡಾ 25ರಷ್ಟು ಪರಿಹಾರವನ್ನು ವಿಮಾ ನಷ್ಟ ಪರಿಹಾರ ನೀಡುವ ಕುರಿತು.

4. ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ಹಂಗಾಮಿನಲ್ಲಿ ಸಂಭವಿಸುವ ಹವಾಮಾನ ವೈಪರಿತ್ಯಗಳಿಗಳಾದ ಹೆಚ್ಚಿನ ಮಳೆ, ನೆರೆ / ಪ್ರವಾಹಗಳಿಂದ ಬೆಳೆ ಮುಳುಗಡೆ, ದೀರ್ಘಕಾಲದ ತೇವಾಂಶ ಕೊರತೆ (**prolonged dry spell**), ತೀವ್ರ ಬರಗಾಲ ಮುಂತಾದವುಗಳಿಂದ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು (**On Account payment due to mid season adversity**), ನಿರೀಕ್ಷಿತ ಇಳುವರಿಯು ಪ್ರಾರಂಭಿಕ ಇಳುವರಿಯ ಶೇಕಡಾ 50ಕ್ಕಿಂತ ಕಡಿಮೆ ಇದ್ದರೆ, ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25ರಷ್ಟು ನೀಡುವ ಕುರಿತು.

5. ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೆ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ (**Post Harvest losses**) ವೈಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸುವ ಕುರಿತು.

6. 2016–17ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರಾಜ್ಯದ ಜಿಲ್ಲೆಗಳನ್ನು ಈ ಕೆಳಗಿನಂತೆ 4 ಗುಂಪುಗಳನ್ನಾಗಿ (ಕ್ಲಸ್ಟರ್) ವಿಂಗಡಿಸುವ ಕುರಿತು.

| ಕ್ಲಸ್ಟರ್ ಸಂಖ್ಯೆ | ಒಳಪಡುವ ಜಿಲ್ಲೆಗಳು |
|---|---|
| ಕ್ಲಸ್ಟರ್ 1 | ಹಾವೇರಿ, ಯಾದಗಿರಿ, ಬೆಳಗಾವಿ, ಕೊಪ್ಪಳ, ಉತ್ತರಕನ್ನಡ, ದಾವಣಗೆರೆ ಮತ್ತು ಕೋಲಾರ |
| ಕ್ಲಸ್ಟರ್ 2 | ಗದಗ, ವಿಜಯಪುರ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಬೆಂಗಳೂರು(ನಗರ) ಮತ್ತು ರಾಮನಗರ |
| ಕ್ಲಸ್ಟರ್ 3 | ಕಲಬುರಗಿ, ತುಮಕೂರು, ಹಾಸನ, ಚಿಕ್ಕಬಳ್ಳಾಪುರ, ರಾಯಚೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ |
| ಕ್ಲಸ್ಟರ್ 4 | ಬಾಗಲಕೋಟೆ, ಬೀದರ್, ಬಳ್ಳಾರಿ, ಧಾರವಾಡ, ದಕ್ಷಿಣಕನ್ನಡ, ಉಡುಪಿ ಮತ್ತು ಮೈಸೂರು |

7. 2016–17ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 16 ವಿಮಾ ಸಂಸ್ಥೆಗಳಾದ ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಐ.ಸಿ.ಐ.ಸಿ.ಐ. ಲೊಂಬಾರ್ಡ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಹೆಚ್.ಡಿ. ಎಫ್.ಸಿ ಎರ್ಗೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಚೋಳಮಂಡಳಮ್ ಎಂ.ಎಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಬಜಾಜ್ ಅಲಿಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಫ್ಯೂಚರ್ ಜನರಲಿ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಟಾಟಾ ಎ.ಐ.ಜಿ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಎಸ್.ಬಿ.ಐ. ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಯೂನಿವರ್ಸಲ್ ಸೋಂಪೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಶ್ರೀರಾಮ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿ., ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಲಿ., ಓರಿಯಂಟಲ್ ಇನ್ಸೂರೆನ್ಸ್ ಕಂಪನಿ ಲಿ., ಹಾಗೂ ನ್ಯೂ ಇಂಡಿಯಾ ಅಸ್ಯೂರೆನ್ಸ್ ಕಂಪನಿ ಲಿ., ವಿಮಾ ಸಂಸ್ಥೆಗಳು ಭಾಗವಹಿಸಲು ಇಚ್ಛಿಸಿದ್ದು, ಭಾಗವಹಿಸಲಿರುವ ವಿಮಾ ಸಂಸ್ಥೆಗಳಿಗೆ ಗುಂಪುವಾರು ಜಿಲ್ಲೆಗಳನ್ನು ಬಿಡ್ ಪ್ರಕ್ರಿಯೆ ಮೂಲಕ ಹಂಚಿಕೆಮಾಡಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಅನುಷ್ಠಾನಗೊಳಿಸು ಕುರಿತು.

8. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಇಂಡೆಮ್ನಿಟಿ ಮಟ್ಟವನ್ನು ನೀರಾವರಿ ಬೆಳೆಗಳಿಗೆ ಶೇ.90 ಹಾಗೂ ಮಳೆಆಶ್ರಿತ ಬೆಳೆಗಳಿಗೆ ಶೇ.80 ಎಂದು ನಿಗಧಿಪಡಿಸುವ ಕುರಿತು.

9. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ವಿಮಾ ಮೊತ್ತವು ರಾಜ್ಯದ ಬೆಳೆವಾರು ಸರಾಸರಿ ಸ್ಕೇಲ್ ಆಫ್ ಫೈನಾನ್ಸ್‌ಗೆ (**Crop-wise State average of Scale of Finance**) ಸಮನಾಗಿಸುವ ಕುರಿತು.

10. ವಿಮಾ ಕಂತನ್ನು ಲೆಕ್ಕಹಾಕಲು ಹಿಂದಿನ 10 ವರ್ಷಗಳ ಅಂದರೆ 2006–07 ರಿಂದ 2015–16ರವರೆಗೆ ಇಳುವರಿ ಮಾಹಿತಿಯನ್ನು ಪರಿಗಣಿಸಬೇಕಾಗಿರುತ್ತದೆ ಹಾಗೂ ಪ್ರಾರಂಭಿಕ ಇಳುವರಿ ಲೆಕ್ಕಹಾಕಲು ಹಿಂದಿನ 7 ವರ್ಷಗಳಲ್ಲಿ 2 ವರ್ಷಗಳ ವಿಪತ್ತೊದಗಿದ ವರ್ಷಗಳ ಇಳುವರಿ ಮಾಹಿತಿಯನ್ನು ಹೊರತುಪಡಿಸಿ ಪರಿಗಣಿಸಬೇಕಾಗಿರುತ್ತದೆ. ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸುವಾಗ 2009–10 ರಿಂದ 2015–16ರವರೆಗೆ ವಿಪತ್ತೊದಗಿದ ವರ್ಷಗಳೆಂದು ಪರಿಗಣಿಸಬೇಕು. ವಿಪತ್ತೊದಗಿದ ಎರಡು ವರ್ಷಗಳ ಇಳುವರಿಯು ಸದರಿ 7 ವರ್ಷಗಳ ಸರಾಸರಿ ಇಳುವರಿಗಿಂತ ಕಡಿಮೆ ಇದ್ದರೆ ಮಾತ್ರ, ಅವುಗಳಲ್ಲಿ ಅತಿ ಕಡಿಮೆ ಇರುವ ಎರಡು ವಿಪತ್ತೊದಗಿದ ವರ್ಷಗಳ ಇಳುವರಿಯನ್ನು ಬಿಟ್ಟು ಉಳಿದ ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸುವ ಕುರಿತು.

11. ಈ ಯೋಜನೆಗೆ ಒಳಪಡುವ ವಿವಿಧ ಬೆಳೆಗಳಿಗೆ ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ರೈತರು ಬ್ಯಾಂಕುಗಳಿಗೆ ಘೋಷಣೆಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕ ಈ ಕೆಳಕಂಡಂತೆ ನಿಗಧಿಪಡಿಸುವ ಕುರಿತು.

| ಹಂಗಾಮು | ಬೆಳೆ ಸಾಲ ಪಡೆಯುವ ರೈತರು | ಬೆಳೆ ಸಾಲ ಪಡೆಯದ ರೈತರು |
|---|---|---|
| ಹಿಂಗಾರು ಹಂಗಾಮು | **31–12–2016** | **31–12–2016** |
| ಬೇಸಿಗೆ ಹಂಗಾಮು | **28–02–2017** | **28–02–2017** |

12. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ 2016–17ರ ಹಿಂಗಾರು ಹಂಗಾಮಿನಲ್ಲಿ ವಿವಿಧ ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು ಮತ್ತು ಕ್ಷೇತ್ರಗಳನ್ನು ಅಳವಡಿಸಿ ಸರ್ಕಾರದ ಆದೇಶವನ್ನು ತೋಟಗಾರಿಕೆ ಇಲಾಖೆಯಿಂದ ಹೊರಡಿಸುವ ಕುರಿತು.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

## ಸರ್ಕಾರದ ಆದೇಶ ಸಂಖ್ಯೆ:ಕೃಇ/110/ಕೃಕೈಉ/2016, ಬೆಂಗಳೂರು; ದಿನಾಂಕ:07–10–2016.

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿಯಲ್ಲಿ ಈ ಕೆಳಕಂಡ 19 ಆಹಾರ ಮತ್ತು ಎಣ್ಣೆಕಾಳು ಬೆಳೆಗಳನ್ನು 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಹೋಬಳಿ ಮತ್ತು ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಅಧಿಸೂಚಿಸಲಾಗಿದೆ. ಸದರಿ ಆಯ್ದ ಬೆಳೆಗಳು, ಹೋಬಳಿಗಳು ಮತ್ತು ಗ್ರಾಮಪಂಚಾಯತಿಗಳ ಸಂಖ್ಯೆಯ ವಿವರ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಬೆಳೆಗಳು | ಹೋಬಳಿ ಮಟ್ಟದ ವಿಮಾ ಘಟಕಗಳ ಸಂಖ್ಯೆ | ಗ್ರಾಮಪಂಚಾಯತಿ ಮಟ್ಟದ ವಿಮಾ ಘಟಕಗಳ ಸಂಖ್ಯೆ |
|---|---|---|---|
| **2016–17ರ ಹಿಂಗಾರು ಹಂಗಾಮು** | | | |
| 1 | ಭತ್ತ (ನೀರಾವರಿ) | 42 | 273 |
| 2 | ಜೋಳ (ನೀರಾವರಿ) | 144 | 114 |
| 3 | ಜೋಳ (ಮಳೆ ಆಶ್ರಿತ) | 94 | 1755 |
| 4 | ರಾಗಿ (ನೀರಾವರಿ) | 70 | – |
| 5 | ರಾಗಿ (ಮಳೆ ಆಶ್ರಿತ) | 53 | 88 |
| 6 | ಮುಸುಕಿನಜೋಳ (ನೀರಾವರಿ) | 153 | 246 |
| 7 | ಮುಸುಕಿನಜೋಳ (ಮಳೆ ಆಶ್ರಿತ) | 74 | – |
| 8 | ಗೋಧಿ (ನೀರಾವರಿ) | 100 | 320 |
| 9 | ಗೋಧಿ (ಮಳೆ ಆಶ್ರಿತ) | 123 | 60 |
| 10 | ಕಡಲೆ (ನೀರಾವರಿ) | 135 | 122 |
| 11 | ಕಡಲೆ (ಮಳೆ ಆಶ್ರಿತ) | 116 | 1518 |
| 12 | ಉದ್ದು (ಮಳೆ ಆಶ್ರಿತ) | 13 | – |
| 13 | ಹುರುಳಿ (ಮಳೆ ಆಶ್ರಿತ) | 204 | 671 |
| 14 | ಹೆಸರು (ಮಳೆ ಆಶ್ರಿತ) | 11 | – |
| 15 | ಅಗಸೆ (ಮಳೆ ಆಶ್ರಿತ) | 45 | – |
| 16 | ಸೂರ್ಯಕಾಂತಿ (ನೀರಾವರಿ) | 166 | 38 |
| 17 | ಸೂರ್ಯಕಾಂತಿ (ಮಳೆ ಆಶ್ರಿತ) | 183 | 153 |
| 18 | ನೆಲಗಡಲೆ (ಶೇಂಗಾ) (ಮಳೆಆಶ್ರಿತ) | 13 | – |
| 19 | ಕುಸುಮೆ (ಮಳೆ ಆಶ್ರಿತ) | 178 | – |
| **2016–17ರ ಬೇಸಿಗೆ ಹಂಗಾಮು** | | | |
| 1 | ಭತ್ತ (ನೀರಾವರಿ) | 154 | 543 |
| 2 | ರಾಗಿ (ನೀರಾವರಿ) | 44 | – |
| 3 | ನೆಲಗಡಲೆ (ಶೇಂಗಾ) (ನೀರಾವರಿ) | 119 | 431 |
| 4 | ನೆಲಗಡಲೆ (ಶೇಂಗಾ) (ಮಳೆಆಶ್ರಿತ) | – | 2 |
| 5 | ಸೂರ್ಯಕಾಂತಿ (ನೀರಾವರಿ) | 118 | 25 |

2. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿಯಲ್ಲಿ ಕೆಳಕಂಡ ಮೂರು ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಹೋಬಳಿ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಅಧಿಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ಬೆಳೆಗಳು | ಹೋಬಳಿ ಮಟ್ಟದ ವಿಮಾ ಘಟಕಗಳ ಸಂಖ್ಯೆ |
|---|---|---|
| **2016–17ರ ಹಿಂಗಾರು ಹಂಗಾಮು** | | |
| 1 | ಈರುಳ್ಳಿ (ನೀರಾವರಿ) | 35 |
| 2 | ಆಲೂಗಡ್ಡೆ (ನೀರಾವರಿ) | 25 |
| 3 | ಟೊಮ್ಯಾಟೋ | 23 |
| **2016–17ರ ಬೇಸಿಗೆ ಹಂಗಾಮು** | | |
| 1 | ಈರುಳ್ಳಿ (ನೀರಾವರಿ) | 16 |
| 2 | ಟೊಮ್ಯಾಟೋ | 5 |

3. ಗುಂಪುವಾರು ಜಿಲ್ಲೆಗಳನ್ನು ವಿಮಾ ಸಂಸ್ಥೆಗಳಿಗೆ ಹಂಚಿಕೆಮಾಡುವ ಕುರಿತು ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

4. ತಾಲ್ಲೂಕುವಾರು ಮುಖ್ಯ ಬೆಳೆಗಳ ಪಟ್ಟಿಯನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

5. ಮೇಲೆ ನಮೂದಿಸಿದ ಆಹಾರ ಮತ್ತು ಎಣ್ಣೆಕಾಳು ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಬೆಳೆವಾರು ಹೋಬಳಿಗಳ ಪಟ್ಟಿಯನ್ನು ಅನುಬಂಧ–2ರಲ್ಲಿ, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಗ್ರಾಮ ಪಂಚಾಯತಿವಾರು ಬೆಳೆಗಳ ಪಟ್ಟಿಯನ್ನು ಅನುಬಂಧ–3ರಲ್ಲಿ ಹಾಗೂ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ತೋಟಗಾರಿಕೆ ಬೆಳೆಗಳ ಹೋಬಳಿವಾರು ಪಟ್ಟಿಯನ್ನು ಅನುಬಂಧ – 4ರಲ್ಲಿ ನೀಡಲಾಗಿದೆ.

6. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆಗಳಿಗೆ ನಿಗದಿಪಡಿಸಲಾಗಿರುವ ಇಂಡೆಮ್ನಿಟಿ ಮಟ್ಟ, ವಿಮಾ ಮೊತ್ತ ಮತ್ತು ರೈತರ ವಿಮಾ ಕಂತಿನ ವಿವರವನ್ನು ಅನುಬಂಧ – 5ರಲ್ಲಿ ನೀಡಲಾಗಿದೆ.

7. ಈ ಯೋಜನೆಯಡಿ 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ (**Localised Calamities**) ಆಲೀಕಲ್ಲು ಮಳೆ, ಭೂ ಕುಸಿತ ಮತ್ತು ಬೆಳೆ ಮುಳುಗಡೆ (ಇನಂಡೇಷನ್) ಇವುಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವೈಯಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ. ಒಂದು ವೇಳೆ ಒಂದು ಅಧಿಸೂಚಿತ ಘಟಕದಲ್ಲಿ ಶೇಕಡಾ 25ಕ್ಕಿಂತ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾದರೆ ಆ ಅಧಿಸೂಚಿತ ಘಟಕದಲ್ಲಿ ಬೆಳೆ ವಿಮೆಗೆ ಒಳಪಟ್ಟ ರೈತರಲ್ಲಿ ಬೆಳೆ ನಷ್ಟವಾದ ರೈತರಿಗೆ ಮಾತ್ರ ಮಾದರಿ ಸಮಿಕ್ಷೆಗನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ಬೆಳೆ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಛೇರಿಗಳಿಗೆ ತಕ್ಷಣ ಸೂಚನೆ ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 48 ಗಂಟೆಗಳೊಳಗಾಗಿ ತಿಳಿಸಬೇಕು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ಕಂದಾಯ ಇಲಾಖೆ ಹಾಗು ಕೃಷಿ ತೋಟಗಾರಿಕಾ ಇಲಾಖೆಯ ಆಡಳಿತವು ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರಿಗೆ ನೆರವು ನೀಡತಕ್ಕದ್ದು.

8. ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸುವಾಗ ಪ್ರಾರಂಭಿಕ ಇಳುವರಿ ಲೆಕ್ಕಹಾಕಲು 7 ವರ್ಷಗಳಾದ 2009–10 ರಿಂದ 2015–16ರವರೆಗಿನ ವಿಪತ್ತೊದಗಿದ ತಾಲ್ಲೂಕುವಾರು ವಿವರಗಳನ್ನು ಅನುಬಂಧ–6ರಲ್ಲಿ ನೀಡಲಾಗಿದೆ. ಪ್ರಾರಂಭಿಕ ಇಳುವರಿ ಲೆಕ್ಕಹಾಕುವಾಗ ಅಧಿಸೂಚಿತ ಬೆಳೆ ವಿಮಾ ಘಟಕದಲ್ಲಿ ಈ ವಿಪತ್ತೊದಗಿದ ವರ್ಷಗಳಲ್ಲಿ 7 ವರ್ಷಗಳ ಸರಾಸರಿ ಇಳುವರಿಗಿಂತ ಕಡಿಮೆ ಇದ್ದರೆ ಮಾತ್ರ, ಅತಿ ಕಡಿಮೆ ಇಳುವರಿ ದಾಖಲಾದ ಎರಡು ವಿಪತ್ತೊದಗಿದ ವರ್ಷಗಳನ್ನು ಹೊರತುಪಡಿಸುವುದು.

9. ವಾಣಿಜ್ಯ ವಿಮಾ ಕಂತಿನ ದರ ಹಾಗೂ ರೈತರು ಕಟ್ಟಬೇಕಾಗಿರುವ ವಿಮಾ ಕಂತಿನ ದರದಲ್ಲಿನ ವ್ಯತ್ಯಾಸದ ಮೊಬಲಗಿನಲ್ಲಿ ಶೇಕಡಾ 50ರಷ್ಟು ಹಣವನ್ನು ರಾಜ್ಯ ಸರ್ಕಾರವು ಭರಿಸಲು ಹಾಗೂ ಈ ಹಣವನ್ನು ಅನುಷ್ಠಾನಗೊಳಿಸುವ ವಿವಿಧ ವಿಮಾ ಸಂಸ್ಥೆಗಳಿಗೆ, ಅಗ್ರಿಕಲ್ಚರ್ ಇನ್ಷೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಸಂಸ್ಥೆಯ ಮೂಲಕ ಪಾವತಿಸಲು ಮಂಜೂರಾತಿ ನೀಡಲಾಗಿದೆ.

10. ಅನುಬಂಧ–2, ಅನುಬಂಧ–3 ಮತ್ತು ಅನುಬಂಧ–4ರ ಗ್ರಾಮ ಪಂಚಾಯತಿ ಮತ್ತು ಹೋಬಳಿಗಳ ಪಟ್ಟಿಯಲ್ಲಿ ನೀಡಲಾಗಿರುವ ಬೆಳೆಗಳಿಗೆ ಬೆಳೆ ಸಾಲ ಪಡೆದ ರೈತರಿಗೆ 2016–17ರ ಹಿಂಗಾರು ಹಂಗಾಮಿಗೆ ದಿನಾಂಕ:31–12–2016 ಹಾಗೂ ಮತ್ತು ಬೇಸಿಗೆ ಹಂಗಾಮಿಗೆ 28–2–2017 ರೊಳಗೆ ಬೆಳೆ ಸಾಲ ಮಂಜೂರಾಗಿದ್ದರೆ ಅಂತಹ ರೈತರನ್ನು ಕಡ್ಡಾಯವಾಗಿ ಯೋಜನೆಯಡಿಯಲ್ಲಿ ಒಳಪಡಿಸತಕ್ಕದ್ದು. ಬೆಳೆ ಸಾಲದ ಮೊತ್ತಕ್ಕೆ ರೈತರ ವಿಮಾ ಕಂತನ್ನು ಹೆಚ್ಚುವರಿಯಾಗಿ ಮಂಜೂರು ಮಾಡತಕ್ಕದ್ದು.

11. ಅನುಬಂಧ–2, ಅನುಬಂಧ–3 ಮತ್ತು ಅನುಬಂಧ–4ರ ಗ್ರಾಮ ಪಂಚಾಯತಿ ಮತ್ತು ಹೋಬಳಿಗಳ ಪಟ್ಟಿಯಲ್ಲಿ ನೀಡಲಾಗಿರುವ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆಯದ ರೈತರು ಯೋಜನೆಯಡಿ ಭಾಗವಹಿಸಲು ಕೊನೆಯ ದಿನಾಂಕ ಹಿಂಗಾರು ಹಂಗಾಮಿಗೆ 31–12–2016 ಹಾಗೂ ಮತ್ತು ಬೇಸಿಗೆ ಹಂಗಾಮಿಗೆ 28–2–2017 ಆಗಿರುತ್ತದೆ. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ / ಖಾತೆ ಪುಸ್ತಕ / ಪಾಸ್ ಪುಸ್ತಕ / ಕಂದಾಯ ರಶೀದಿಯನ್ನು ನೀಡತಕ್ಕದ್ದು.

12. ಈ ಯೋಜನೆಯಡಿಯಲ್ಲಿ ಬೆಳೆ ಸಾಲ ಪಡೆಯದ ರೈತರು ಅಂದಾಜು ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲೆ ಪಾಲ್ಗೊಳ್ಳಬಹುದು. ಬೆಳೆ ವಿಮೆಗೆ ನೊಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದಲ್ಲಿ ಯೋಜನೆಯಲ್ಲಿ ಭಾಗವಹಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕಿಂತ 30 ದಿವಸಗಳು ಮುಂಚಿತವಾಗಿ ನೊಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣಪತ್ರ ನೀಡಿ ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸತಕ್ಕದ್ದು, ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸತಕ್ಕದ್ದು ಅಥವಾ ಹೆಚ್ಚುವರಿ ವಿಮಾ ಕಂತನ್ನು ರೈತರಿಗೆ ಮರುಪಾವತಿಸುವುದು.

13. ನೋಡಲ್ ಬ್ಯಾಂಕುಗಳು ಅಂತಿಮವಾಗಿ ಪ್ರಸ್ತಾವನೆಗಳನ್ನು ವಿಮಾ ಸಂಸ್ಥೆಗೆ ನೀಡಲು ಬೆಳೆ ಸಾಲ ಪಡೆದ ರೈತರಿಗೆ ಹಿಂಗಾರು ಹಂಗಾಮಿಗೆ ಕೊನೆಯ ದಿನಾಂಕ:15–01–2017 ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ದಿನಾಂಕ:07–01–2017 ಆಗಿರುತ್ತದೆ. ಬೇಸಿಗೆ ಹಂಗಾಮಿನಲ್ಲಿ ಬೆಳೆ ಸಾಲ ಪಡೆದ ರೈತರಿಗೆ ಕೊನೆಯ ದಿನಾಂಕ:15–03–2017 ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ದಿನಾಂಕ:07–03–2017 ಆಗಿರುತ್ತದೆ. ಯಾವುದಾದರೂ ಆರ್ಥಿಕ ಸಂಸ್ಥೆಗಳು ಕೊನೆಯ ದಿನಾಂಕದೊಳಗೆ ಅಂತಿಮ ಪ್ರಸ್ತಾವನೆಗಳನ್ನು ವಿಮಾ ಸಂಸ್ಥೆಗೆ ಸಲ್ಲಿಸದಿದ್ದರೆ ಅದರ ಜವಾಬ್ದಾರಿ ಸಂಬಂಧಿಸಿದ ಆರ್ಥಿಕ ಸಂಸ್ಥೆಗಳದ್ದೇ ಆಗಿರುತ್ತದೆ.

14. ಬ್ಯಾಂಕುಗಳಿಗೆ ವಿಮಾ ಸಂಸ್ಥೆಯು ರೈತರ ವಿಮಾ ಕಂತಿನ ಮೊತ್ತದಲ್ಲಿ ಶೇ. 4 ರಷ್ಟು ಸೇವಾ ಶುಲ್ಕವನ್ನು ನೀಡತಕ್ಕದ್ದು.

15. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಬ್ಯಾಂಕುಗಳಿಗೆ ವರ್ಗಾಯಿಸಿದ ಒಂದು ವಾರದೊಳಗೆ ರೈತರ ಖಾತೆಗೆ ಜಮಾ ಮಾಡತಕ್ಕದ್ದು. ರೈತರ ಖಾತೆಗೆ ಜಮಾ ಮಾಡಿದ ವಿವರಗಳನ್ನು ಬ್ಯಾಂಕುಗಳು ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿ ಸದರಿ ವಿವರಗಳನ್ನು ವಿಮಾ ಸಂಸ್ಥೆಗೆ ನೀಡತಕ್ಕದ್ದು.

16. ವಿಮಾ ಸಂಸ್ಥೆಗಳು ಬೆಳೆ ಸಾಲ ಪಡೆಯದ ರೈತರನ್ನು ಅಧಿಕೃತ ಏಜೆಂಟರ ಮೂಲಕವೂ ಸಹ ಯೋಜನೆಯಡಿ ಒಳಪಡಿಸಲು ಅನುಮತಿ ನೀಡಲಾಗಿದೆ.

17. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಅಧಿಸೂಚಿತ ಘಟಕದಲ್ಲಿ ಶೇಕಡಾ 75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ (**Prevented sowing/Planting Risk**) ವಿಮಾ ಮೊತ್ತದ ಗರಿಷ್ಟ ಶೇಕಡಾ 25ರಷ್ಟು ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥಪಡಿಸಿ ಮುಂದಿನ ಅವಧಿಗೆ ವಿಮೆಯನ್ನು ರದ್ದುಪಡಿಸತಕ್ಕದ್ದು. ಈ ಸಂಬಂಧ ಬಿತ್ತನೆ ಕ್ಷೇತ್ರದ ವರದಿಯನ್ನು ಘೋಷಿಸಲು ಜಿಲ್ಲಾ ಜಿಲ್ಲಾಧಿಕಾರಿಯವರನ್ನು ಹಾಗೂ ಮಳೆ ಮತ್ತು ಇತರೆ ಕೃಷಿ ಹವಾಮಾನದ ವರದಿಯನ್ನು ನೀಡಲು ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

18. ಎಲ್ಲಾ ಜಿಲ್ಲೆಗಳ ಬೆಳೆವಾರು, ಅಧಿಸೂಚಿತ ಘಟಕವಾರು ಸಾಮಾನ್ಯ ಬಿತ್ತನೆ ಕ್ಷೇತ್ರದ ವಿವರ, ಜಿಲ್ಲಾವಾರು, ಬೆಳೆವಾರು ಬಿತ್ತನೆ ಪ್ರಾರಂಭವಾಗುವ ಹಾಗೂ ಬಿತ್ತನೆ ಕೊನೆಗೊಳ್ಳುವ ಅವಧಿಗಳ ಸರ್ಕಾರಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

19. **Prevented sowing / Planting Risk** ಬಂದಂತಹ ಸಂದರ್ಭದಲ್ಲಿ ನೋಡಲ್ ಅಧಿಕಾರಿಗಳಿಂದ ವರದಿ ಬಂದನಂತರ ಒಂದು ತಿಂಗಳೊಳಗೆ ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಮೇಲಿನಂತೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

20. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಅಧಿಸೂಚಿತ ಘಟಕದಲ್ಲಿ ಸಂಭವಿಸುವ ಹವಾಮಾನ ವೈಪರಿತ್ಯಗಳಿಗಳಾದ ಹೆಚ್ಚಿನ ಮಳೆ, ನೆರೆ / ಪ್ರವಾಹಗಳಿಂದ ಬೆಳೆ ಮುಳುಗಡೆ, ದೀರ್ಘಕಾಲದ ತೇವಾಂಶ ಕೊರತೆ (**prolonged dry spell**), ತೀವ್ರ ಬರಗಾಲ ಮುಂತಾದವುಗಳಿಂದ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು (**On Account payment due to mid season adversity**), ನಿರೀಕ್ಷಿತ ಇಳುವರಿಯು ಪ್ರಾರಂಭಿಕ ಇಳುವರಿಯ ಶೇಕಡಾ 50ಕ್ಕಿಂತ ಕಡಿಮೆ ಇದ್ದರೆ, ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡತಕ್ಕದ್ದು. ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಬೆಳೆ ಇಳುವರಿ ಮಾಹಿತಿ ಬಂದನಂತರ ಅಂತಿಮ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಈ ಹಣವನ್ನು ಹೊಂದಾಣಿಕೆ ಮಾಡತಕ್ಕದ್ದು. ಈ ಬಗ್ಗೆ ವರದಿಯನ್ನು ನೀಡಲು ಜಿಲ್ಲಾ ಜಿಲ್ಲಾಧಿಕಾರಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

21. ಜಿಲ್ಲಾವಾರು, ಬೆಳೆವಾರು ಬೆಳೆ ಕಟಾವು ಅವಧಿಯ ಸರ್ಕಾರಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

22. ಈ ಯೋಜನೆಯಡಿ 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೆ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ (**Post harvest losses**) ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸಲಾಗಿದೆ.

23. ಕಂಡಿಕೆ 7, 17, 20 ಮತ್ತು 22ಗಳಲ್ಲಿ ವಿವರಿಸಿರುವಂತೆ ಬೆಳೆ ನಷ್ಟವನ್ನು ಜಿಲ್ಲಾ ಮಟ್ಟದಲ್ಲಿ ಕೃಷಿ, ಕಂದಾಯ, ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು, ಸಂಬಂಧಿಸಿದ ವಿಮಾ ಸಂಸ್ಥೆಯ ಅಧಿಕಾರಿಗಳು, ಲೀಡ್ ಬ್ಯಾಂಕ್ ಅಧಿಕಾರಿಗಳನ್ನೊಳಗೊಂಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯು ಅಂದಾಜಿಸಿ ತೀರ್ಮಾನಿಸಿದಂತೆ ವಿಮೆ ಮಾಡಿಸಿದ ರೈತರಿಂದ ಅರ್ಜಿ ಬಂದ ನಂತರ ಒಂದು ತಿಂಗಳೊಳಗೆ ವಿಮಾ ಸಂಸ್ಥೆಗಳು ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

24. ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡುಹಿಡಿಯಲಾದ ಇಳುವರಿ ಮಾಹಿತಿಯನ್ನು ಮಾತ್ರ ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಿ ಇತ್ಯರ್ಥಪಡಿಸಕತಕ್ಕದ್ದು. ಇತರೆ ಇಳುವರಿ ಅಂದಾಜು ಮಾಡುವಂತಹ ವಿಧಾನಗಳಾದ ಆಣೆವಾರಿ ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇಲಾಖೆ ಅಥವಾ ಸಂಸ್ಥೆ, ಕ್ಷಾಮ, ಬರ, ಪ್ರವಾಹ ಎಂದು ಘೋಷಿಸಿ ಇಳುವರಿ ನಷ್ಟವನ್ನು ಅಂದಾಜು ಮಾಡುವ ಮಾಹಿತಿಯನ್ನು ಈ ಯೋಜನೆಯಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲು ಪರಿಗಣಿಸತಕ್ಕದ್ದಲ್ಲ.

25. ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಧಿಸೂಚಿಸಬೇಕಾದರೆ ಆ ಬೆಳೆಯ ವಿಸ್ತೀರ್ಣ ಕನಿಷ್ಠ 50 ಹೆಕ್ಟೇರ್ ಇರಬೇಕು. ಹೋಬಳಿ ಮಟ್ಟದಲ್ಲಿ ಬೆಳೆಗಳನ್ನು ಅಧಿಸೂಚಿಸಲು ಆ ಬೆಳೆಯ ವಿಸ್ತೀರ್ಣ ಕನಿಷ್ಠ 125 ಹೆಕ್ಟೇರ್ (100 ಹೆಕ್ಟೇರ್–ತೋಟಗಾರಿಕೆ ಬೆಳೆಗಳಿಗೆ) ಇರಬೇಕು.

26. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಅವಶ್ಯಕತೆಗೆ ತಕ್ಕಂತೆ ಬೆಳೆ ವಿಸ್ತೀರ್ಣ ಲಭ್ಯವಿಲ್ಲದ ಕಾರಣ ಯಾವುದೇ ಬೆಳೆಗೆ ನಿಗಧಿಪಡಿಸಿದ ಸಂಖ್ಯೆಯ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ ಮುಂದಿನ ಹೆಚ್ಚುವರಿ ಘಟಕದ (**Yield of Next higher unit**) ಇಳುವರಿ ಮಾಹಿತಿಯನ್ನು ಪರಿಗಣಿಸತಕ್ಕದ್ದು.



27. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಇವರು ಅಧಿಸೂಚಿತ ಬೆಳೆಗಳಿಗೆ ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಘಟಕವಾರು ಅಂದರೆ

ಹೋಬಳಿವಾರು ಹಾಗೂ ಗ್ರಾಮ ಪಂಚಾಯಿತಿವಾರು ಬೆಳೆ ಕಟಾವು ಪ್ರಯೋಗಗಳನ್ನು ನಡೆಸಲು ಯೋಜಿಸುವುದು ಹಾಗೂ ಮೂಲ ಕಾರ್ಯಕರ್ತರುಗಳಿಗೆ ತರಬೇತಿಯ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು ಹಾಗೂ ಯಾವುದಾದರೂ ಘಟಕದಲ್ಲಿ ಒಂದಕ್ಕಿಂತ ಹೆಚ್ಚಿನ ಕೃಷಿ ಹವಾಮಾನ ವಲಯಗಳು ಕಂಡುಬಂದಲ್ಲಿ, ಆ ಘಟಕದಲ್ಲಿ ಕೃಷಿ ಹವಾಮಾನ ವಲಯಗಳು ಹೊಂದಿರತಕ್ಕ ಕ್ಷೇತ್ರಕ್ಕೆ ಅನುಗುಣವಾಗಿ ಬೆಳೆ ಕಟಾವು ಪ್ರಯೋಗಗಳನ್ನು ನಿಗದಿಪಡಿಸತಕ್ಕದ್ದು. ಬೆಳೆವಾರು ಬೆಳೆ ಕಟಾವು ಪ್ರಯೋಗಗಳು ಮುಗಿದಾದ ನಂತರ ಒಂದು ತಿಂಗಳೊಳಗಾಗಿ ಬೆಳೆ ಇಳುವರಿ ಮಾಹಿತಿ ಹಾಗೂ ಬಿತ್ತನೆ ಕ್ಷೇತ್ರದ ವಿವರಗಳನ್ನು ಕಡ್ಡಾಯವಾಗಿ ವಿಮಾ ಸಂಸ್ಥೆಗಳಿಗೆ ನೀಡತಕ್ಕದ್ದು. ಹಿಂಗಾರು ಹಂಗಾಮಿನ ಇಳುವರಿ ಮತ್ತು ಬಿತ್ತನೆ ಕ್ಷೇತ್ರದ ಮಾಹಿತಿಯನ್ನು ಅಂತಿಮವಾಗಿ ಜೂನ್, 2017ರ ಅಂತ್ಯದೊಳಗೆ ಹಾಗೂ ಬೇಸಿಗೆ ಹಂಗಾಮಿನ ಇಳುವರಿ ಮತ್ತು ಬಿತ್ತನೆ ಕ್ಷೇತ್ರದ ಮಾಹಿತಿಯನ್ನು ಅಂತಿಮವಾಗಿ ಜುಲೈ, 2017ರ ಅಂತ್ಯದೊಳಗೆ ವಿಮಾ ಸಂಸ್ಥೆಗಳಿಗೆ ನೀಡತಕ್ಕದ್ದು.

28. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವಿಮಾ ಸಂಸ್ಥೆಗಳು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಿ, ವಿಮೆ ಮಾಡಿಸಿದ ರೈತರಿಗೆ ಎಲ್ಲಾ ಬೆಳೆಗಳಿಗೆ ಅಂತಿಮವಾಗಿ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ಕರ್ಮವಾಗಿ ಸೆಪ್ಟೆಂಬರ್ ಹಾಗೂ ಅಕ್ಟೋಬರ್ 2017ರ ಅಂತ್ಯದೊಳಗೆ ಇತ್ಯರ್ಥಪಡಿಸತಕ್ಕದ್ದು.

29. 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಯೋಜನೆಯನ್ನು ಅನುಷ್ಠಾನಗೊಳಿಸಲು ವಿಮಾ ಸಂಸ್ಥೆಗಳು ಕೈಗೊಳ್ಳುವ ಪ್ರಚಾರ, ಪ್ರಕಟಣೆ ಮತ್ತು ತರಬೇತಿ ನೀಡುವಲ್ಲಿ ಸಹಕಾರ ನೀಡುವುದು.

30. ಕೃಷಿ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳು 2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಅಧಿಸೂಚಿಸಿರುವ ಬೆಳೆಗಳು ಮತ್ತು ಘಟಕಗಳ ಬಗ್ಗೆ ಬ್ಯಾಂಕುಗಳ, ರೈತ ಸಂಪರ್ಕ ಕೇಂದ್ರಗಳ ಮತ್ತು ಗ್ರಾಮ ಪಂಚಾಯತಿ ಕಛೇರಿಗಳ ಸೂಚನಾ ಫಲಕಗಳ ಮೇಲೆ ಪ್ರಕಟಿಸಿ ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಿದೆ.

31. ಅನುಷ್ಠಾನ ಸಂಸ್ಥೆಗಳು ಅವಶ್ಯಕತೆ ಇದ್ದಲ್ಲಿ, ಸ್ವಂತ ಅಥವಾ ಇತರೆ ಸಂಸ್ಥೆಗಳ ಮೂಲಕ ವಿಮೆ ಮಾಡಿಸಿದ ಬಿತ್ತನೆ ಕ್ಷೇತ್ರ ಮತ್ತು ಬೆಳೆಗಳ ಪರಿಸ್ಥಿತಿಯ ಬಗ್ಗೆ ತನಿಖೆ ಕೈಗೊಳ್ಳಬಹುದು. ಈ ತನಿಖೆಗೆ ಉಪಗ್ರಹ ಆಧಾರಿತ ಮಾಹಿತಿಯನ್ನು ಬಳಸಿಕೊಳ್ಳಬಹುದು.

32. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನ ವಿಮಾ ಸಂಸ್ಥೆಗಳು ಬೆಳೆ ವಿಮಾ ಯೋಜನೆಯಲ್ಲಿ ಭಾಗವಹಿಸಲಿರುವ ವಿವಿಧ ಸಂಸ್ಥೆಗಳ ಜೊತೆಯಲ್ಲಿ ಸಮನ್ವಯ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಗೆ,

1) ಪಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ರಾಜ್ಯದ ಬೆಳೆ ವಿಮಾ ಸಮಿತಿಯ ಎಲ್ಲಾ ಸದಸ್ಯರಿಗೆ.
3) ಕೃಷಿ ಆಯುಕ್ತರು, ಬೆಂಗಳೂರು.
4) ಕೃಷಿ ನಿರ್ದೇಶಕರು, ಬೆಂಗಳೂರು.

5) ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
6) ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7) ಎಲ್ಲಾ ಜಿಲ್ಲಾಧಿಕಾರಿಗಳು.
8) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
9) ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು.
10) ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
11) ಎಲ್ಲಾ ಲೀಡ್ ಬ್ಯಾಂಕುಗಳು.
12) ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು.
13) ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು.
14) ಎಲ್ಲಾ ನೋಡಲ್ ಬ್ಯಾಂಕುಗಳು.
15) ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು – 560 0.
16) ಸಂಬಂಧಿಸಿದ ಎಲ್ಲಾ ವಿಮಾ ಸಂಸ್ಥೆಗಳು.
17) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ –4), ಬೆಂಗಳೂರು.
18) ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
19) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
20) ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.
21) ರಕ್ಷಾ ಕಡತ : ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 2, 7 ರಿಂದ 9 ಮತ್ತು 15 & 16 – ರವರೆಗೆ ಕೃಷಿ ನಿರ್ದೇಶಕರ ಮೂಲಕ,
ಕ್ರಮ ಸಂಖ್ಯೆ: 10 – ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಳಾಖೆ, ಇವರ ಮೂಲಕ
ಕ್ರಮ ಸಂಖ್ಯೆ: 11, 13 ಮತ್ತು 14 ರವರೆಗೆ– ಎಸ್.ಎಲ್.ಬಿ.ಸಿ. ಮೂಲಕ ಹಾಗೂ
ಕ್ರಮ ಸಂಖ್ಯೆ: 12 – ಅಪೆಕ್ಸ್ ಬ್ಯಾಂಕ್‌ನ ಮೂಲಕ)

## ಅನುಬಂಧ – 1

**ಸರ್ಕಾರದ ಆದೇಶದ ಸಂಖ್ಯೆ:ಕೃಇ/110/ಕೃಕೈಉ/2016, ಬೆಂಗಳೂರು; ದಿನಾಂಕ:07–10–2016.**

**2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಧಿಸೂಚಿತ ತಾಲ್ಲೂಕುವಾರು ಮುಖ್ಯ ಬೆಳೆಗಳ ಪಟ್ಟಿ**

| ಜಿಲ್ಲೆ | ತಾಲ್ಲೂಕು | ಹಿಂಗಾರು ಬೆಳೆಗಳು | ಬೇಸಿಗೆ ಬೆಳೆಗಳು |
|---|---|---|---|
| 1. ಬಾಗಲಕೋಟೆ | ಬಾದಾಮಿ | ಜೋಳ (ಮ.ಆ), ಸೂರ್ಯಕಾಂತಿ(ಮ.ಆ) | – |
| | ಬಾಗಲಕೋಟೆ | ಜೋಳ (ಮ.ಆ), ಕಡಲೆ (ಮ.ಆ) | ಸೂರ್ಯಕಾಂತಿ (ನೀ) |
| | ಬೀಳಗಿ | ಜೋಳ (ಮ.ಆ), ಕಡಲೆ (ಮ.ಆ) | ಸೂರ್ಯಕಾಂತಿ (ನೀ) |
| | ಹುನಗುಂದ | ಜೋಳ (ಮ.ಆ), ಕಡಲೆ (ಮ.ಆ) | – |
| | ಜಮಕಂಡಿ | ಮುಸುಕಿನ ಜೋಳ (ನೀ) | – |
| | ಮುಧೋಳ | ಮುಸುಕಿನ ಜೋಳ (ನೀ), ಗೋಧಿ(ನೀ) | ಸೂರ್ಯಕಾಂತಿ (ನೀ) |
| 2. ಬೆಳಗಾವಿ | ಅಥಣಿ | ಮುಸುಕಿನ ಜೋಳ (ನೀ), ಗೋಧಿ(ನೀ) | – |
| | ಬೈಲಹೊಂಗಲ | ಜೋಳ (ಮ.ಆ), ಕಡಲೆ (ಮ.ಆ) | – |
| | ಬೆಳಗಾವಿ | ಜೋಳ (ಮ.ಆ) | – |
| | ಚಿಕ್ಕೋಡಿ | ಜೋಳ (ಮ.ಆ), ಗೋಧಿ(ನೀ) | – |
| | ಗೋಕಾಕ್ | ಮುಸುಕಿನ ಜೋಳ (ನೀ), ಗೋಧಿ(ನೀ) | – |
| | ಹುಕ್ಕೇರಿ | ಜೋಳ (ಮ.ಆ) | – |
| | ರಾಯಬಾಗ್ | ಗೋಧಿ(ನೀ) | – |
| | ರಾಮದುರ್ಗ | ಜೋಳ (ಮ.ಆ), ಗೋಧಿ(ನೀ) | – |
| | ಸವದತ್ತಿ | ಜೋಳ (ಮ.ಆ), ಕಡಲೆ (ಮ.ಆ) | – |
| 3. ಬಳ್ಳಾರಿ | ಬಳ್ಳಾರಿ | ಜೋಳ (ನೀ), ಕಡಲೆ (ನೀ) | – |
| | ಹಗರಿಬೊಮ್ಮನಹಳ್ಳಿ | – | ನೆಲಗಡಲೆ (ಶೇಂಗಾ)(ನೀ) |
| | ಹಡಗಲಿ | ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಸಿರಗುಪ್ಪ | ಕಡಲೆ (ಮ.ಆ) | ಭತ್ತ(ನೀ) |
| 4. ಬೀದರ್ | ಔರಾದ್ | ಜೋಳ (ಮ.ಆ), ಕಡಲೆ (ಮ.ಆ) | – |
| | ಬಸವಕಲ್ಯಾಣ | ಜೋಳ (ಮ.ಆ), ಕಡಲೆ (ಮ.ಆ) | – |
| | ಭಾಲ್ಕಿ | ಜೋಳ (ಮ.ಆ), ಕಡಲೆ (ಮ.ಆ) | – |
| | ಬೀದರ್ | ಜೋಳ (ಮ.ಆ), ಕಡಲೆ (ಮ.ಆ) | – |
| | ಹುಮನಾಬಾದ್ | ಜೋಳ (ಮ.ಆ), ಕಡಲೆ (ಮ.ಆ) | – |
| 5. ವಿಜಯಪುರ | ಬ.ಬಾಗೇವಾಡಿ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಬಿಜಾಪುರ | ಜೋಳ (ಮ.ಆ), ಕಡಲೆ (ಮ.ಆ) | – |
| | ಇಂಡಿ | ಜೋಳ (ಮ.ಆ), ಕಡಲೆ (ಮ.ಆ) | – |
| | ಮುದ್ದೇಬಿಹಾಳ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಸಿಂದಗಿ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| 6.ಚಾಮರಾಜನಗರ | ಚಾಮರಾಜನಗರ | ಹುರುಳಿ (ಮ.ಆ) | – |
| | ಗುಂಡ್ಲುಪೇಟೆ | ಹುರುಳಿ (ಮ.ಆ) | – |
| | ಕೊಳ್ಳೇಗಾಲ | ಹುರುಳಿ (ಮ.ಆ) | – |
| 7. ಚಿಕ್ಕಮಗಳೂರು | ಕಡೂರು | ಕಡಲೆ (ಮ.ಆ), ಹುರುಳಿ (ಮ.ಆ) | – |
| 8. ಚಿತ್ರದುರ್ಗ | ಚಳ್ಳಕೆರೆ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಚಿತ್ರದುರ್ಗ | ಕಡಲೆ (ಮ.ಆ) | – |
| | ಹಿರಿಯೂರು | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಹೊಳಲ್ಕೆರೆ | ಕಡಲೆ (ಮ.ಆ) | – |
| | ಮೊಳಕಾಲ್ಮೂರು | ಮುಸುಕಿನ ಜೋಳ (ನೀ) | – |

| ಜಿಲ್ಲೆ | ತಾಲ್ಲೂಕು | ಹಿಂಗಾರು ಬೆಳೆಗಳು | ಬೇಸಿಗೆ ಬೆಳೆಗಳು |
|---|---|---|---|
| 9. ದಕ್ಷಿಣಕನ್ನಡ | ಬಂಟ್ವಾಳ | ಭತ್ತ(ನೀ) | – |
| | ಬೆಳ್ತಂಗಡಿ | ಭತ್ತ(ನೀ) | – |
| | ಮಂಗಳೂರು | ಭತ್ತ(ನೀ) | ಭತ್ತ(ನೀ) |
| | ಪುತ್ತೂರು | ಭತ್ತ(ನೀ) | – |
| | ಸುಳ್ಯ | ಭತ್ತ(ನೀ) | – |
| 10. ದಾವಣಗೆರೆ | ದಾವಣಗೆರೆ | – | ಭತ್ತ(ನೀ) |
| | ಹರಪನಹಳ್ಳಿ | ಸೂರ್ಯಕಾಂತಿ (ನೀ) | ಸೂರ್ಯಕಾಂತಿ (ನೀ) |
| | ಹೊನ್ನಾಳಿ | ಮುಸುಕಿನ ಜೋಳ (ನೀ) | – |
| | ಜಗಳೂರು | ಮುಸುಕಿನ ಜೋಳ (ನೀ), ಕಡಲೆ (ಮ.ಆ) | – |
| 11. ಧಾರವಾಡ | ಧಾರವಾಡ | ಜೋಳ (ಮ.ಆ), ಕಡಲೆ (ಮ.ಆ) | – |
| | ಹುಬ್ಬಳ್ಳಿ | ಜೋಳ (ಮ.ಆ) | – |
| | ಕಲಘಟಗಿ | ಜೋಳ (ಮ.ಆ) | – |
| | ಕುಂದಗೋಳ | ಜೋಳ (ಮ.ಆ), ಕಡಲೆ (ಮ.ಆ) | – |
| | ನವಲಗುಂದ | ಜೋಳ (ಮ.ಆ), ಕಡಲೆ (ಮ.ಆ) | – |
| 12. ಗದಗ | ಗದಗ | ಜೋಳ (ಮ.ಆ), ಕಡಲೆ (ಮ.ಆ) | – |
| | ಮುಂಡರಗಿ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ನರಗುಂದ | ಜೋಳ (ನೀ), ಕಡಲೆ (ನೀ) | – |
| | ರೋಣ | ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಶಿರಹಟ್ಟಿ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| 13. ಕಲಬುರ್ಗಿ | ಅಫಜಲಪುರ | ಜೋಳ (ನೀ), ಜೋಳ (ಮ.ಆ), ಗೋಧಿ (ನೀ), ಗೋಧಿ(ಮ.ಆ), ಕಡಲೆ (ನೀ), ಕಡಲೆ (ಮ.ಆ), ಸೂರ್ಯಕಾಂತಿ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಅಳಂದ | ಜೋಳ (ನೀ), ಜೋಳ (ಮ.ಆ), ಗೋಧಿ (ನೀ), ಗೋಧಿ(ಮ.ಆ), ಕಡಲೆ (ನೀ), ಕಡಲೆ (ಮ.ಆ), ಸೂರ್ಯಕಾಂತಿ (ನೀ), ಸೂರ್ಯಕಾಂತಿ (ಮ.ಆ) | – |
| | ಚಿಂಚೋಳಿ | ಜೋಳ (ಮ.ಆ), ಗೋಧಿ(ಮ.ಆ), ಕಡಲೆ (ಮ.ಆ) | – |
| | ಚಿತ್ತಾಪುರ | ಜೋಳ (ಮ.ಆ), ಕಡಲೆ (ಮ.ಆ) | – |
| | ಕಲಬುರ್ಗಿ | ಜೋಳ (ಮ.ಆ), ಕಡಲೆ (ಮ.ಆ), ಗೋಧಿ (ನೀ), ಸೂರ್ಯಕಾಂತಿ (ಮ.ಆ) | ನೆಲಗಡಲೆ (ಶೇಂಗಾ) (ನೀ) |
| | ಜೇವರ್ಗಿ | ಜೋಳ (ನೀ), ಜೋಳ (ಮ.ಆ), ಕಡಲೆ (ನೀ), ಕಡಲೆ (ಮ.ಆ), ಗೋಧಿ (ನೀ), ಗೋಧಿ (ಮ.ಆ), ಸೂರ್ಯಕಾಂತಿ (ಮ.ಆ) | ಭತ್ತ (ನೀ), ನೆಲಗಡಲೆ (ಶೇಂಗಾ) (ನೀ) |
| | ಸೇಡಂ | ಜೋಳ (ಮ.ಆ), ಕಡಲೆ (ಮ.ಆ) | – |
| 14. ಹಾಸನ | ಆಲೂರು | ರಾಗಿ (ಮ.ಆ) | – |
| | ಅರಸೀಕೆರೆ | ಕಡಲೆ (ಮ.ಆ) | – |
| | ಬೇಲೂರು | ರಾಗಿ (ಮ.ಆ) | – |
| | ಹಾಸನ | ರಾಗಿ (ಮ.ಆ) | – |

| ಜಿಲ್ಲೆ | ತಾಲ್ಲೂಕು | ಹಿಂಗಾರು ಬೆಳೆಗಳು | ಬೇಸಿಗೆ ಬೆಳೆಗಳು |
|---|---|---|---|
| 15.ಹಾವೇರಿ | ಬ್ಯಾಡಗಿ | ಜೋಳ (ಮ.ಆ) | – |
| | ಹಾನಗಲ್ | ಮುಸುಕಿನ ಜೋಳ (ನೀ) | – |
| | ಹಾವೇರಿ | ಜೋಳ (ಮ.ಆ), ಮುಸುಕಿನ ಜೋಳ (ನೀ) | ನೆಲಗಡಲೆ (ಶೇಂಗಾ)(ನೀ) |
| | ಹಿರೇಕೆರೂರು | ಜೋಳ (ಮ.ಆ) | – |
| | ರಾಣೇಬೆನ್ನೂರು | ಜೋಳ (ಮ.ಆ) | – |
| | ಸವಣೂರು | ಜೋಳ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಶಿಗ್ಗಾಂವ್ | ಜೋಳ (ಮ.ಆ) | – |
| 16. ಕೋಲಾರ | ಬಂಗಾರಪೇಟೆ | ಹುರುಳಿ (ಮ.ಆ) | – |
| | ಕೋಲಾರ | ಹುರುಳಿ (ಮ.ಆ) | – |
| | ಮಾಲೂರು | ಹುರುಳಿ (ಮ.ಆ) | – |
| | ಮುಳಬಾಗಿಲು | ಹುರುಳಿ (ಮ.ಆ) | – |
| | ಶ್ರೀನಿವಾಸಪುರ | ಹುರುಳಿ (ಮ.ಆ) | – |
| 17. ಕೊಪ್ಪಳ | ಗಂಗಾವತಿ | ಕಡಲೆ (ಮ.ಆ) | – |
| | ಕೊಪ್ಪಳ | ಜೋಳ (ಮ.ಆ), ಕಡಲೆ (ಮ.ಆ) | ನೆಲಗಡಲೆ (ಶೇಂಗಾ)(ನೀ) |
| | ಕುಷ್ಟಗಿ | ಕಡಲೆ (ಮ.ಆ) | – |
| | ಯಲಬುರ್ಗ | ಜೋಳ (ಮ.ಆ), ಕಡಲೆ (ಮ.ಆ) | – |
| 18. ಮಂಡ್ಯ | ಮದ್ದೂರು | ಹುರುಳಿ (ಮ.ಆ) | – |
| | ಮಂಡ್ಯ | ಹುರುಳಿ (ಮ.ಆ) | ಭತ್ತ (ನೀ) |
| | ನಾಗಮಂಗಲ | ಹುರುಳಿ (ಮ.ಆ) | – |
| | ಪಾಂಡವಪುರ | ಹುರುಳಿ (ಮ.ಆ) | ಭತ್ತ (ನೀ) |
| | ಶ್ರೀರಂಗಪಟ್ಟಣ | ಹುರುಳಿ (ಮ.ಆ) | ಭತ್ತ (ನೀ) |
| 19. ಮೈಸೂರು | ಹೆಗ್ಗಡದೇವನಕೋಟೆ | ಹುರುಳಿ (ಮ.ಆ) | – |
| | ಕೃಷ್ಣರಾಜನಗರ | ಹುರುಳಿ (ಮ.ಆ) | – |
| | ಮೈಸೂರು | ಹುರುಳಿ (ಮ.ಆ) | – |
| | ನಂಜನಗೂಡು | ಹುರುಳಿ (ಮ.ಆ) | ಭತ್ತ (ನೀ) |
| | ಪಿರಿಯಾಪಟ್ಟಣ | ಹುರುಳಿ (ಮ.ಆ), ರಾಗಿ (ಮ.ಆ) | – |
| | ಟಿ.ನರಸೀಪುರ | ಹುರುಳಿ (ಮ.ಆ) | ಭತ್ತ (ನೀ) |
| 20. ರಾಯಚೂರು | ದೇವದುರ್ಗ | ಜೋಳ (ಮ.ಆ), ಕಡಲೆ (ಮ.ಆ) | ಭತ್ತ (ನೀ), ನೆಲಗಡಲೆ (ಶೇಂಗಾ) (ನೀ) |
| | ಲಿಂಗಸುಗೂರು | ಜೋಳ (ಮ.ಆ), ಕಡಲೆ (ಮ.ಆ) | – |
| | ಮಾನ್ವಿ | ಜೋಳ (ಮ.ಆ), ಕಡಲೆ (ಮ.ಆ) | ಭತ್ತ (ನೀ), |
| | ರಾಯಚೂರು | ಜೋಳ (ಮ.ಆ), ಕಡಲೆ (ಮ.ಆ) | ಭತ್ತ (ನೀ), ನೆಲಗಡಲೆ (ಶೇಂಗಾ) (ನೀ) |
| | ಸಿಂಧನೂರು | ಜೋಳ (ಮ.ಆ), ಕಡಲೆ (ಮ.ಆ) | ಭತ್ತ (ನೀ) |
| 21. ರಾಮನಗರ | ಕನಕಪುರ | ಹುರುಳಿ (ಮ.ಆ) | – |
| | ಮಾಗಡಿ | ಹುರುಳಿ (ಮ.ಆ) | – |
| 22. ಶಿವಮೊಗ್ಗ | ಭದ್ರಾವತಿ | – | ಭತ್ತ (ನೀ) |
| | ಶಿಕಾರಿಪುರ | ಸೂರ್ಯಕಾಂತಿ (ನೀ) | ಭತ್ತ (ನೀ) |
| | ಶಿವಮೊಗ್ಗ | – | ಭತ್ತ (ನೀ) |
| | ಸೊರಬ | – | ಭತ್ತ (ನೀ) |

| ಜಿಲ್ಲೆ | ತಾಲ್ಲೂಕು | ಹಿಂಗಾರು ಬೆಳೆಗಳು | ಬೇಸಿಗೆ ಬೆಳೆಗಳು |
|---|---|---|---|
| 23. ತುಮಕೂರು | ಚಿಕ್ಕನಾಯಕನಹಳ್ಳಿ | ಜೋಳ (ಮ.ಆ) | ಭತ್ತ (ನೀ) |
| | ಗುಬ್ಬಿ | – | ಭತ್ತ (ನೀ) |
| | ಕೊರಟಗೆರೆ | – | ಭತ್ತ (ನೀ) |
| | ಕುಣಿಗಲ್ | – | ಭತ್ತ (ನೀ) |
| | ಪಾವಗಡ | – | ನೆಲಗಡಲೆ (ಶೇಂಗಾ)(ನೀ) |
| | ಶಿರಾ | – | ಭತ್ತ (ನೀ), ನೆಲಗಡಲೆ (ಶೇಂಗಾ)(ನೀ) |
| | ತಿಪಟೂರು | – | ಭತ್ತ (ನೀ) |
| | ತುಮಕೂರು | – | ಭತ್ತ (ನೀ) |
| | ತುರುವೇಕೆರೆ | – | ಭತ್ತ (ನೀ) |
| 24. ಉಡುಪಿ | ಕಾರ್ಕಳ | ಭತ್ತ (ನೀ) | – |
| | ಕುಂದಾಪುರ | ಭತ್ತ (ನೀ) | – |
| | ಉಡುಪಿ | ಭತ್ತ (ನೀ) | – |
| 25. ಉತ್ತರಕನ್ನಡ | ಹೊನ್ನಾವರ | – | ಭತ್ತ (ನೀ) |
| | ಕುಮಟಾ | – | ನೆಲಗಡಲೆ (ಶೇಂಗಾ)(ಮ.ಆ) |
| | ಮುಂಡಗೋಡ | – | ಭತ್ತ (ನೀ) |
| | ಸಿದ್ದಾಪುರ | – | ಭತ್ತ (ನೀ) |
| | ಸೂಪಾ | – | ಭತ್ತ (ನೀ) |
| 26. ಯಾದಗಿರಿ | ಶಹಪುರ | ಜೋಳ (ಮ.ಆ) | ಭತ್ತ (ನೀ) |
| | ಶೋರಾಪುರ | ಜೋಳ (ಮ.ಆ) | ಭತ್ತ (ನೀ) |
| | ಯಾದಗಿರಿ | ಜೋಳ (ಮ.ಆ) | – |

(ಆರ್.ಎಸ್.ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

## ಅನುಬಂಧ – 5

**ಸರ್ಕಾರದ ಆದೇಶದ ಸಂಖ್ಯೆ:ಕೃಇ/110/ಕೃಕೈಉ/2016, ಬೆಂಗಳೂರು; ದಿನಾಂಕ:30–11–2016.**

**2016–17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವಿವಿಧ ಬೆಳೆಗಳಿಗೆ ನಿಗಧಿಪಡಿಸಲಾಗಿರುವ ಇಂಡೆಮ್ನಿಟಿ ಮಟ್ಟ, ವಿಮಾ ಮೊತ್ತ ಮತ್ತು ವಿಮಾ ಕಂತಿನ ವಿವರಗಳು.**

| ಕ್ರ. ಸಂ | ನಿರ್ಧರಿತ ಬೆಳೆಗಳು | ಇಂಡೆಮ್ನಿಟಿ ಮಟ್ಟ (ಶೇಕಡ) | ಸಾಮಾನ್ಯ ವಿಮೆಗೆ ಪ್ರತಿ ಹೆಕ್ಟೇರ್ ಗೆ (ಪ್ರಾರಂಭಿಕ ಇಳುವರಿಯ ಮೌಲ್ಯದವರೆಗೆ) | |
|---|---|---|---|---|
| | | | ವಿಮಾ ಮೊತ್ತ (ರೂ.ಗಳಲ್ಲಿ) | ವಿಮಾ ಕಂತು (ಶೇಕಡ) |
| | | **2016–17ರ ಹಿಂಗಾರು** | | |
| 1 | ಭತ್ತ (ನೀರಾವರಿ) | 90 | 82000 | 1.50 |
| 2 | ಜೋಳ (ನೀರಾವರಿ) | 90 | 36000 | 1.50 |
| 3 | ಜೋಳ (ಮಳೆ ಆಶ್ರಿತ) | 80 | 31000 | 1.50 |
| 4 | ರಾಗಿ (ನೀರಾವರಿ) | 90 | 42000 | 1.50 |
| 5 | ರಾಗಿ (ಮಳೆ ಆಶ್ರಿತ) | 80 | 34000 | 1.50 |
| 6 | ಮುಸುಕಿನ ಜೋಳ (ನೀರಾವರಿ) | 90 | 58000 | 1.50 |
| 7 | ಮುಸುಕಿನಜೋಳ (ಮಳೆ ಆಶ್ರಿತ) | 80 | 48000 | 1.50 |
| 8 | ಗೋಧಿ (ನೀರಾವರಿ) | 90 | 16100 | 1.50 |
| 9 | ಗೋಧಿ (ಮಳೆ ಆಶ್ರಿತ) | 80 | 11090 | 1.50 |
| 10 | ಕಡಲೆ (ನೀರಾವರಿ) | 90 | 12500 | 1.50 |
| 11 | ಕಡಲೆ (ಮಳೆ ಆಶ್ರಿತ) | 80 | 12500 | 1.50 |
| 12 | ಉದ್ದು (ಮಳೆ ಆಶ್ರಿತ) | 80 | 28000 | 1.50 |
| 13 | ಹುರುಳಿ (ಮಳೆ ಆಶ್ರಿತ) | 80 | 19000 | 1.50 |
| 14 | ಹೆಸರು (ಮಳೆ ಆಶ್ರಿತ) | 80 | 29000 | 1.50 |
| 15 | ಅಗಸೆ (ಮಳೆ ಆಶ್ರಿತ) | 80 | 30000 | 1.50 |
| 16 | ಸೂರ್ಯಕಾಂತಿ (ನೀರಾವರಿ) | 90 | 41000 | 1.50 |
| 17 | ಸೂರ್ಯಕಾಂತಿ (ಮಳೆ ಆಶ್ರಿತ) | 80 | 34000 | 1.50 |
| 18 | ನೆಲಗಡಲೆ(ಶೇಂಗಾ)(ಮಳೆಆಶ್ರಿತ) | 80 | 44000 | 1.50 |
| 19 | ಕುಸುಮೆ (ಮಳೆ ಆಶ್ರಿತ) | 80 | 30000 | 1.50 |
| 20 | ಈರುಳ್ಳಿ (ನೀರಾವರಿ) | 90 | 71000 | 5.00 |
| 21 | ಆಲೂಗೆಡ್ಡೆ (ನೀರಾವರಿ) | 90 | 134000 | 5.00 |
| 22 | ಟೊಮ್ಯಾಟೊ | 90 | 113000 | 5.00 |
| | | **2016–17ರ ಬೇಸಿಗೆ** | | |
| 1 | ಭತ್ತ (ನೀರಾವರಿ) | 90 | 82000 | 1.50 |
| 2 | ರಾಗಿ (ನೀರಾವರಿ) | 90 | 42000 | 1.50 |
| 3 | ನೆಲಗಡಲೆ(ಶೇಂಗಾ)(ನೀರಾವರಿ) | 90 | 55000 | 1.50 |
| 4 | ನೆಲಗಡಲೆ(ಶೇಂಗಾ)(ಮಳೆಆಶ್ರಿತ) | 80 | 44000 | 1.50 |
| 5 | ಸೂರ್ಯಕಾಂತಿ (ನೀರಾವರಿ) | 90 | 41000 | 1.50 |
| 6 | ಈರುಳ್ಳಿ (ನೀರಾವರಿ) | 90 | 71000 | 5.00 |
| 7 | ಟೊಮ್ಯಾಟೊ | 90 | 113000 | 5.00 |

( )

ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ